ಕಾಣಿಸಿಕೊಂಡವು. ಅವಕ್ಕೆ ತಿಳಿಗಂದು ಬಣ್ಣದ ಮೈಯಿ. ಹೊಟ್ಟೆಯ ಭಾಗ ಬಿಳಿ. ಭತ್ತದ ಕಾಳಿನಷ್ಟು ಸಣ್ಣ ಕೊಕ್ಕು. ಮೆಣಸಿನಕಾಳಿನಷ್ಟು ಸಣ್ಣ ಕಣ್ಣು, ಸಣ್ಣ ಸಣ್ಣ ಕಾಲು. ಹಾರುತ್ತಿರುವಾಗ ಅವುಗಳ ರೆಕ್ಕೆಗಳು ಗಾಳಿಗೆ ಬಡಿಬಡಿದು ಪುರ್ರೆನ್ನುತ್ತಿದ್ದವು.

ಅವನ ಮನಸ್ಸಿನಲ್ಲಿ ತಾನು ನೋಡಿದ್ದ ಗುಬ್ಬಚ್ಚಿಗಳಲ್ಲೇ ಒಂದು ಗುಬ್ಬಚ್ಚಿ ಕಾಣಿಸಿಕೊಂಡಿತು. ಆಮೇಲೆ ಅವನ ಕಣ್ಣು ಕಾಗದದ ಮೇಲೆ ನಿಧಾನವಾಗಿ ಮೂಡುತ್ತಿದ್ದ ಗುಬ್ಬಚ್ಚಿಯನ್ನೇ ನೋಡತೊಡಗಿತು. ಉಳಿದ ಮಕ್ಕಳೆಲ್ಲರೂ ತಮ್ಮ ತಮ್ಮ ಚಿತ್ರಗಳನ್ನು ಬರೆಯುತ್ತಿದ್ದರೆ ಕುರ್ಚಿಯಲ್ಲಿ ಕುಳಿತಿದ್ದ ಸಿಸ್ಟರ್ ರೋಸಿ ಗಲ್ಲಕ್ಕೆ ಕೈಯಾನಿಸಿಕೊಂಡು ಏನೋ ಯೋಚಿಸುತ್ತಿದ್ದರು. ಅವರ ದೃಷ್ಟಿ ಹೊರಗೆಲ್ಲೋ ಇದ್ದಂತಿತ್ತು. ಇಡೀ ಕ್ಲಾಸು ನಿಶ್ಶಬ್ದ. ಹತ್ತು ಹದಿನೈದು ನಿಮಿಷಗಳಾದ ಮೇಲೆ ಒಂದೆರಡು ಮಕ್ಕಳು ಮೇಲೆದ್ದು ನಿಂತುಕೊಂಡು ಚಿತ್ರ ಬರೆದಾಯಿತು ಮಿಸ್ ಎಂದರು, ಜೋರಾಗಿ.

ಸಿಸ್ಟರ್ ರೋಸಿ ಬೆಚ್ಚಿಬಿದ್ದಂತೆ ಮೈಕೊಡವಿಕೊಂಡು ಮೇಲೆದ್ದವರು ಮಕ್ಕಳು ಇದ್ದಲ್ಲಿಗೆ ಹೋಗಿ ಅವರು ಬರೆದ ಚಿತ್ರಗಳನ್ನು ತೆಗೆದುಕೊಂಡು ಮತ್ತೆ ತಮ್ಮ ಕುರ್ಚಿಯಲ್ಲಿ ಕುಳಿತುಕೊಂಡರು. ಒಂದೊಂದೇ ಚಿತ್ರಗಳನ್ನು ನೋಡುನೋಡುತ್ತಿದ್ದಂತೆ ಅವರ ತುಟಿಗಳಲ್ಲಿ ಕಂಡೂ ಕಾಣದಂಥ ನಸುನಗು. ಅವರಿಗೆ ಇಷ್ಟವಾದ ಚಿತ್ರಗಳಲ್ಲಿ ಬಾಲಕೃಷ್ಣ ಬರೆದಿದ್ದ ಚಿತ್ರವೂ ಒಂದು. ಅದನ್ನು ಮಕ್ಕಳಿಗೆಲ್ಲ ತೋರಿಸುತ್ತ, ನೋಡಿ ಇಲ್ಲಿ ನಿಜವಾದ ಗುಬ್ಬಚ್ಚಿಯೇ ಇದೆ ಎಂದರು. ಹತ್ತು ಗಂಟೆಯಾಗುತ್ತಿದ್ದಂತೆ ರಿಜಿಸ್ಟರಿನಲ್ಲಿ ಏನೋ ಬರೆದವರು ಅದನ್ನು ಮುಚ್ಚಿಟ್ಟು ಒಂದು ಕತೆ ಹೇಳತೊಡಗಿದರು. ರಾಜಕುಮಾರಿ ಸ್ನೋ ವೈಟ್ ಮತ್ತು ಏಳು ಗುಜ್ಜಾರಿಗಳ ಕತೆ. ರಾಜಕುಮಾರಿ ಸ್ನೋ ವೈಟ್‌ಗೆ ಒಬ್ಬ ಮಲತಾಯಿ ಇದ್ದಳು. ಅವಳ ಹತ್ತಿರ ಒಂದು ಮಾಯಾ ಕನ್ನಡಿ ಇತ್ತು. ಅದು ಯಾವಾಗಲೂ ಅವಳಂಥ ಸುಂದರಿ ಇನ್ನೊಬ್ಬಳು ಇಲ್ಲ ಅಂತ ಹೇಳ್ತಾ ಇತ್ತು. ಈ ಮಧ್ಯೆ ಸ್ನೋ ವೈಟ್ ಬೆಳೆಯುತ್ತಾ ಬೆಳೆಯುತ್ತಾ ಎಲ್ಲರನ್ನೂ ಮೀರಿಸುವಂಥ ಸುಂದರಿಯಾದಳು. ಆಮೇಲೆ ಒಂದು ದಿನ ಮಲತಾಯಿ ಯಾರು ತುಂಬಾ ತುಂಬಾ ಸುಂದರಿ ಎಂದು ಕನ್ನಡಿಯನ್ನು ಕೇಳಿದಾಗ ಅದು ಸ್ನೋ ವೈಟ್ ಅಂತ ಹೇಳಿತು. ಅದನ್ನು ಕೇಳಿ ಮಲತಾಯಿಗೆ ತುಂಬಾ ಸಿಟ್ಟು ಬಂತು. ಅಸೂಯೆ ಕೂಡ ಆಯಿತು. ಅವಳು ಬೇಟೆಗಾರ ಒಬ್ಬನನ್ನು ಕರೆದು ಅವನಿಗೆ ಸ್ನೋ ವೈಟಳನ್ನು ಕಾಡಿಗೆ ಕರೆದುಕೊಂಡು ಹೋಗಿ ಕೊಂದುಬಿಡು ಎಂದು ಹೇಳಿದಳು... ಈ ಕತೆಯನ್ನು ಕೇಳುತ್ತಿರುವಾಗಲೇ ಬಾಲಕೃಷ್ಣನಿಗೆ ಹಿಂದೊಮ್ಮೆ ಅವನ ಅಮ್ಮ ಕ್ರಿಶ್ಚಿಯನ್ ನನ್‌ಗಳ ಬಗ್ಗೆ ಹೇಳಿದ್ದ ಮಾತು ನೆನಪಾಯಿತು. ನನ್ ಆದವರು ಸಮಯ ಸಿಕ್ಕಾಗಲೆಲ್ಲ ಚರ್ಚಿಗೆ ಹೋಗಬೇಕೆಂದೂ, ಏನೇ ಕೆಲಸ ಮಾಡುತ್ತಿರಲಿ, ಸದಾ ಯೇಸುವನ್ನು ಪ್ರಾರ್ಥಿಸುತ್ತಿರಬೇಕೆಂದೂ, ರಾತ್ರಿ ನಮ್ಮ ನಿಮ್ಮ ಹಾಗೆ ಮೆತ್ತನೆಯ ಹಾಸಿಗೆಯಲ್ಲಿ ಮಲಗದೆ ಒಂದು ಚಾಪೆಯ ಮೇಲಷ್ಟೇ ಮಲಗಬೇಕೆಂದೂ, ಊಟ ತಿಂಡಿಯಲ್ಲಿ ತುಂಬ ಹಾಳತವಾಗಿರಬೇಕೆಂದೂ, ಸದಾ ಪರರ ಹಿತವನ್ನಷ್ಟೇ ಬಯಸಬೇಕೆಂದೂ ಹೇಳಿದ್ದರು ಅಮ್ಮ. ಈಗ ಅದೇಕೋ ಅವನಿಗೆ ಸಿಸ್ಟರ್ ರೋಸಿ ತುಂಬ ಪಾಪದವರು ಎನ್ನಿಸಿತು.

ಹೊರಗೆ ಅಂಗಳದಲ್ಲಿ ಬಸ್ಸು ಬಂದು ನಿಂತ ಸದ್ದು. ಜೊತೆಗೆ ಒಬ್ಬರು ಟೀಚರ್ ಊದುತ್ತಿರುವ ವಿಷಲ್. ಕತೆಯಿನ್ನೂ ಮುಗಿದಿರಲಿಲ್ಲ. ಸಿಸ್ಟರ್ ರೋಸಿ ಕತೆಯನ್ನು ಅರ್ಧಕ್ಕೇ ನಿಲ್ಲಿಸಿ, ಟೇಬಲಿನ ಮೇಲಿದ್ದ ಪುಸ್ತಕಗಳನ್ನು ಸರಿಸಿಟ್ಟು ಎದ್ದು ನಿಂತರು.

ಬಸ್ಸು ಬಂತು. ಹೊರಡೋಣವಾ ದೇವನಹಳ್ಳಿಗೆ?

ಮಕ್ಕಳೆಲ್ಲರೂ ಹೋ ಎಂದು ಕೂಗಿಕೊಳ್ಳುತ್ತ ತಮ್ಮ ತಮ್ಮ ಪುಸ್ತಕಗಳನ್ನು ಚೀಲಗಳಿಗೆ ತುಂಬಿಟ್ಟು ಹೊರ ಬಾಗಿಲಿನ ಕಡೆ ಓಡಿದರು. ಬಾಲಕೃಷ್ಣನಂತೂ ತುಂಬಾ ಸಂತೋಷದಿಂದ ಕುಣಿದಾಡಿದನೆನ್ನಬೇಕು.

ಹೊರಗಡೆ ಮೊದಲೇ ದಟ್ಟವಾಗಿದ್ದ ಮಂಜು ಇನ್ನಷ್ಟು ದಟ್ಟವಾಗುತ್ತಿತ್ತು. ಹೆಡ್‌ಮಾಸ್ಟರ್ ಗೇಬ್ರಿಯಲ್ ಚಿನ್ನಪ್ಪ ಮಕ್ಕಳನ್ನೆಲ್ಲ ಅಂಗಳದಲ್ಲಿ ಸಾಲಾಗಿ ನಿಲ್ಲಿಸುತ್ತಿದ್ದರು. ಎಲ್ಲ ಟೀಚರುಗಳ ಮುಖದಲ್ಲೂ ಸಂತೋಷ ತುಳುಕಾಡುತ್ತಿದ್ದರೆ ಸಿಸ್ಟರ್ ರೋಸಿಯವರ ಮುಖದಲ್ಲಿ ಮಾತ್ರ ಅದೇನೋ ನೋವು, ನಿರಾಸೆ.

ಸ್ವಲ್ಪ ಹೊತ್ತಿನಲ್ಲೇ ಬಸ್ಸು ಕಾನ್ವೆಂಟಿನ ಅಂಗಳದಲ್ಲಿ ಎರಡೆರಡು ಸಾಲುಗಳಾಗಿ ನಿಂತುಕೊಂಡಿದ್ದ ಮಕ್ಕಳನ್ನು ಹತ್ತಿಸಿಕೊಂಡು ದೇವನಹಳ್ಳಿಯ ದಾರಿ ಹಿಡಿಯಿತು. ಗಂಟೆ ಹತ್ತಾದರೂ ಬಿಸಿಲಿನ ಸುಳಿವಿಲ್ಲ. ಸರಿಯಾಗಿ ಕಾಣಿಸದ ರಸ್ತೆ ಬೇರೆ. ಹಾಗಾಗಿ ಬಸ್ಸು ತನ್ನ ಹೆಡ್‌ಲೈಟುಗಳನ್ನು ಉರಿಸುತ್ತಾ ಮುಂದೆ ಸಾಗಿತು.